# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 621(655) |
| ಸದಸ್ಯರ ಹೆಸರು | : | ಶ್ರೀ ಗೋವಿಂದರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 19.09.2022 |
| ಉತ್ತರಿಸುವ ಸಚಿವರು | : | ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರಗಳು</th></tr>
<tr><td>ಅ)</td><td>ಕೋಲಾರ ಜಿಲ್ಲೆಯಲ್ಲಿ ಔಷಧ ನಿಯಂತ್ರಣಾ ಇಲಾಖೆಯ ವ್ಯಾಪ್ತಿಗೆ ಸರ್ಕಾರಿ ಮತ್ತು ಖಾಸಗಿಯ ಎಷ್ಟು ಔಷಧ ಮಳಿಗೆಗಳು ಬರುತ್ತದೆ; ಇವುಗಳಲ್ಲಿ ಸಗಟು ಮತ್ತು ಚಿಲ್ಲರೆ ವ್ಯಾಪಾರ ಮಳಿಗೆಗಳೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)</td><td>ಕೋಲಾರ ಜಿಲ್ಲೆಯಲ್ಲಿ ಔಷಧ ನಿಯಂತ್ರಣಾ ಇಲಾಖೆಯ ವ್ಯಾಪ್ತಿಗೆ ಬರುವ ಸರ್ಕಾರಿ ಮತ್ತು ಖಾಸಗಿಯ ಔಷಧ ಮಳಿಗೆಗಳ ತಾಲ್ಲೂಕುವಾರು ವಿವರಗಳು ಕೆಳಕಂಡಂತಿವೆ:
<table>
<tr><th>ಕ್ರ. ಸಂ</th><th>ತಾಲ್ಲೂಕಿನ ಹೆಸರು</th><th>ಸಗಟು ಮಾರಾಟ ಮಳಿಗೆಗಳು</th><th>ಚಿಲ್ಲರೆ ಮಾರಾಟ ಮಳಿಗೆಗಳು</th><th>ಸರ್ಕಾರಿ ಔಷಧ ವಿತರಣಾ ಕೇಂದ್ರಗಳು</th></tr>
<tr><td>1</td><td>ಕೋಲಾರ</td><td>188</td><td>61</td><td>19</td></tr>
<tr><td>2</td><td>ಬಂಗಾರಪೇಟೆ</td><td>181</td><td>25</td><td>14</td></tr>
<tr><td>3</td><td>ಮಾಲೂರು</td><td>110</td><td>10</td><td>15</td></tr>
<tr><td>4</td><td>ಮುಳಬಾಗಿಲು</td><td>105</td><td>09</td><td>10</td></tr>
<tr><td>5</td><td>ಶ್ರೀನಿವಾಸಪುರ</td><td>63</td><td>05</td><td>20</td></tr>
<tr><td></td><td>ಒಟ್ಟು</td><td>647</td><td>110</td><td>78</td></tr>
</table></td></tr>
<tr><td>ಆ)</td><td>ಔಷಧ ಮಾರಾಟ ಮಳಿಗೆಗಳನ್ನು ಪ್ರಾರಂಭಿಸಲು ಇರುವ ನೀತಿ ನಿಯಮಗಳೇನು;</td><td>ಔಷಧ ಮಾರಾಟ ಮಳಿಗೆಗಳನ್ನು ಪ್ರಾರಂಭಿಸಲು ಔಷಧ ಮತ್ತು ಕಾಂತಿವರ್ಧಕ ನಿಯಮಾವಳಿಗಳು 1945 ರಡಿಯಲ್ಲಿನ ನಿಯಮ 61 ರಿಂದ 64 ರಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ.</td></tr>
<tr><td>ಇ)</td><td>ಔಷಧ ಮಾರಾಟ ಮಳಿಗೆಗಳು ಸರ್ಕಾರದ ನೀತಿ ನಿಯಮದಡಿಯಲ್ಲಿ ಪ್ರಾಮಾಣಿಕವಾಗಿ ನಡೆಯುತ್ತಿದೆಯೇ ಎಂಬುದನ್ನು ಪರಿಶೀಲನೆ ನಡೆಸಲು ಸರ್ಕಾರ ಯಾವ ಅಧಿಕಾರಿಗಳನ್ನು ನೇಮಿಸಿದೆ; (ನೇಮಿಸಿದ್ದಲ್ಲಿ, ಅಂತಹ ಅಧಿಕಾರಿ ಹಾಗೂ ಅವರ ತಂಡದ ವಿವರಗಳನ್ನು ಒದಗಿಸುವುದು)</td><td>ಔಷಧ ಮಾರಾಟ ಮಳಿಗೆಗಳು ಔಷಧ ಮತ್ತು ಕಾಂತಿವರ್ಧಕ ನಿಯಮಾವಳಿಗಳನ್ನು ಪಾಲಿಸುತ್ತಿರುವ ಬಗ್ಗೆ ಪರಿಶೀಲಿಸಲು ಮತ್ತು ನಿಯಮಗಳನ್ನು ಜಾರಿಗೊಳಿಸಲು ಇಲಾಖೆಯು ಜಿಲ್ಲಾಮಟ್ಟದಲ್ಲಿ ಸಹಾಯಕ ಔಷಧ ನಿಯಂತ್ರಕರು ಮತ್ತು ಔಷಧ ಪರಿವೀಕ್ಷಕರು ವೃಂದದ ಅಧಿಕಾರಿಗಳನ್ನು ನೇಮಿಸಲಾಗಿದೆ. ಹಾಗೂ ವಿಭಾಗೀಯ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಗುಪ್ತ ಶಾಖೆಯ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.</td></tr>
<tr><td>ಈ)</td><td>ಎಷ್ಟು ಮಾರಾಟ ಮಳಿಗೆಗಳಿಗೆ ಅನುಗುಣವಾಗಿ ಎಷ್ಟು ಔಷಧ ಪರಿವೀಕ್ಷಕರುಗಳ ಹುದ್ದೆ ಇರಬೇಕು;</td><td>ಜಿಲ್ಲೆಗಳಲ್ಲಿರುವ ಔಷಧ ಮಾರಾಟ ಮಳಿಗೆಗಳಿಗೆ ಅನುಗುಣವಾಗಿ ಔಷಧ ಪರಿವೀಕ್ಷಕರುಗಳ ಮತ್ತು ಸಹಾಯಕ ಔಷಧ ನಿಯಂತ್ರಕರುಗಳ ಹುದ್ದೆಗಳನ್ನು ಸೃಜಿಸಲಾಗಿರುತ್ತದೆ.</td></tr>
<tr><td>ಉ)</td><td>ಕೋಲಾರ ಜಿಲ್ಲೆಗೆ ಪ್ರಸ್ತುತ ಎಷ್ಟು ಹುದ್ದೆಗಳನ್ನು ಸರ್ಕಾರ ಮಂಜೂರು ಮಾಡಿದೆ; ಇದರಲ್ಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳೆಷ್ಟು; ಖಾಲಿಯಿರುವ ಹುದ್ದೆಗಳೆಷ್ಟು;</td><td>ಕೋಲಾರ ಜಿಲ್ಲೆಗೆ ಮಂಜೂರಾಗಿರುವ ಹಾಗೂ ಖಾಲಿಯಿರುವ ಹುದ್ದೆಗಳ ವಿವರ ಕೆಳಕಂಡಂತಿದೆ.
<table>
<tr><th>ಹುದ್ದೆ</th><th>ಮಂಜೂರಾದ ಹುದ್ದೆಗಳು</th><th>ಭರ್ತಿಯಾದ ಹುದ್ದೆಗಳು</th><th>ಖಾಲಿ ಹುದ್ದೆಗಳು</th></tr>
<tr><td>ಸಹಾಯಕ ಔಷಧ ನಿಯಂತ್ರಕರು</td><td>01</td><td>01</td><td>0</td></tr>
<tr><td>ಔಷಧ ಪರಿವೀಕ್ಷಕರು</td><td>02</td><td>0</td><td>02</td></tr>
<tr><td>ಪ್ರ.ದ.ಸ</td><td>01</td><td>01</td><td>0</td></tr>
<tr><td>ದತ್ತಾಂಶ ನಮೂದು ಸಹಾಯಕರು</td><td>01</td><td>01</td><td>0</td></tr>
<tr><td>ಗ್ರೂಪ್ – ಡಿ</td><td>01</td><td>01</td><td>0</td></tr>
</table></td></tr>
</table>

...2

| | | |
|---|---|---|
| ಊ) | ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಕೈಗೊಂಡ ಕ್ರಮವೇನು? | ಖಾಲಿ ಇರುವ ಔಷಧ ಪರಿವೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ಕುರಿತಂತೆ ಕರ್ನಾಟಕ ಲೋಕಸೇವಾ ಆಯೋಗವು, ದಿನಾಂಕ:23.06.2021 ರಂದು ಆಯ್ಕೆ ಪಟ್ಟಿಯನ್ನು ಇಲಾಖೆಗೆ ಸಲ್ಲಿಸಿರುತ್ತದೆ. ಸದರಿ ಹುದ್ದೆಗಳ ನೇಮಕಾತಿಯನ್ನು ಪ್ರಶ್ನಿಸಿ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಪಿಟಿಷನ್ ಸಂಖ್ಯೆ:10575/2021ರ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ:24.06.2021ರ ಆದೇಶದಲ್ಲಿ ತಡೆಯಾಜ್ಞೆ ನೀಡಿದ್ದು, ವಿಚಾರಣೆ ಕೈಗೊಂಡು, ಅಂತಿಮ ತೀರ್ಪಿಗಾಗಿ ಪ್ರಕರಣವನ್ನು ಕಾಯ್ದಿರಿಸಲಾಗಿರುತ್ತದೆ. |

ಸಂಖ್ಯೆ: ಆಕುಕ 127 ಐಎಂಎಂ 2022

**(ಡಾ|| ಕೆ. ಸುಧಾಕರ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು